**<u>ದಿನಾಂಕಃ 11.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದಃ</u>

ದಾವಾ ಸ್ವತ್ತಿನಲ್ಲಿ ಬೋರೆವಲ್ ಇದೆ ಎಂದರೆ ಸರಿ. ಸದರಿ ಬೋರೆವಲ್ ನ್ನು ವಾದಿ ಮದನಿ ರಾಮಯ್ಯ ಚೌದ್ರಿ ರವರು ಕೊರಿಸಿದ್ದರು ಎಂದರೆ ನಾನು ಖರೀದಿ ಮಾಡುವ ಕಲಾಕ್ಕೆ ಬೋರೆವಲ್ ಸ್ವತ್ತಿನಲ್ಲಿ ಇತ್ತು. ವಿಜಯ ಕೂಮಾರವರಿಂದ ಬೋರೆವಲ್ ಯಾರು ಕೋರಿಸಿದ್ದರು ಆ ಸಂಬಂಧ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಅವರೇ ಕೋರಿಸಿರಬಹುದು ಎಂದು ತಿಳಿದುಕೊಂಡಿದ್ದೆ. ಖರೀದಿ ಮಾಡುವ ಪೂರ್ವದಲ್ಲಿ ಚಿಕ್ಕಬಣ್ಣಾವರ ಗ್ರಾಮ ಪಂಚಾಯತ ವ್ಯಾಪ್ತಿಗೆ ಬರುತ್ತಿತ್ತು ಎಂದರೆ ಸರಿ. ಚಿಕ್ಕಬಣ್ಣಾವರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಖರೀದಿ ಮಾಡುವ ಪೂರ್ವದಲ್ಲಿ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ಪರಿಶೀಲಿಸಿದ್ದೀರಾ ಎಂದರೆ ಇಲ್ಲ. ಖಾತೆ ವಾದಿ ಮದನಿ ರಾಮಯ್ಯ ಚೌದ್ರಿ ಹೆಸರಿನಲ್ಲಿ ಇತ್ತು ಎಂದರೆ ಗೊತ್ತಿಲ್ಲ. ಸ್ವತ್ತಿಗೆ ಕಂದಾಯವನ್ನು ವಾದಿ ಮದನಿ ರಾಮಯ್ಯ ಚೌದ್ರಿ ಕಟ್ಟುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಖರಿದಿ ಮಾಡಿದ ನಂತರ ನಾನೆ ಕಂದಾಯ ಕಟ್ಟುತ್ತಿದ್ದೇನೆ. ನೀವು ಖರೀದಿ ಮಾಡುವ ಪೂರ್ವದಲ್ಲಿ ಖಾತೆ ಯಾರ ಹೆಸರಿನಲ್ಲಿ ಇದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಬ್ಯಾಂಕನಲ್ಲಿ ದಾಖಲೆಗಳು ಕೊಟ್ಟಿದ್ದೆ ಅಲ್ಲಿ ಸರಿ ಎಂದು ಹೇಳಿದ ಮೇಲೆ ಖರಿದಿ ಮಾಡಿದ್ದೆ. ಸಾಕ್ಷಿಗೆ 2001-2002 ರ ಖಾತೆ ದಾಖಲೆಯನ್ನು ತೋರಿಸಿ ಖಾತೆ ವಾದಿ ಹೆಸರಿನಲ್ಲಿ ಇದೆ ಎಂದು ಸಾಕ್ಷಿ ದಾಖಲೆಯನ್ನು ಪರಿಶೀಲಿಸಿ

ಇರಬಹುದು ಎಂದು ಹೇಳಿರುತ್ತಾರೆ. ಖಾತಾ ಮತ್ತು ಸ್ವಾಧೀನ ಯಾರ ಹೆಸರಿನಲ್ಲಿ ಇತ್ತು ಎಂದು ನೀವು 2001-02 ರಲ್ಲಿ ಖಾತಾ ದಾಖಲೆಯನ್ನು ಪಡೆದುಕೊಂಡಿದ್ದರೆ ಗೊತ್ತಾಗುತ್ತಿತ್ತು ಎಂದರೆ ವಿಜಯಕುಮಾರವರ ಹೆಸರಿನಲ್ಲಿ ಇತ್ತು. ನಿಪಿ-40 ಯಾರ ಹೆಸರಿನಲ್ಲಿ ಇದೆ ಮತ್ತು ಯಾರಿಗೆ ಮಂಜೂರಾಗಿತ್ತು ಎಂದರೆ ಸಾಕ್ಷಿ ನಿಪಿ-40 ನ್ನು ಪರಿಶೀಲಿಸಿ ಸ್ವತ್ತಿನ ಸಂಖ್ಯೆ-44 ಎಂದು ಇದೆ ನನ್ನ ಸ್ವತ್ತಿನ ಸಂಖ್ಯೆ-42 ಎಂದು ಹೇಳಿರುತ್ತಾರೆ. ನೀವು ಹಾಜರು ಪಡಿಸಿರುವ ಈಗಾಗಲೇ ಗುರುತಿಸಲಾಗಿರುವ ನಿಡಿ-40,41,42,43,44 ದಾವೆಯನ್ನು ಹೂಡಿದ ನಂತರ ಪಾವತಿಸಿರುವ ಕಂದಾಯ ರಶೀದಿಗಳು ಎಂದರೆ ಸರಿ. ದಿಃ02.04.2015 ರ ಪೂರ್ವದಲ್ಲಿ ನೀವು ಅವರನ್ನು ಸ್ವತ್ತಿನಿಂದ ಬಲವಂತವಾಗಿ ಹೊರಹಾಕಿ ನೀವು ಸ್ವಾಧೀನಕ್ಕೆ ಹೋಗಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಜಯಕುಮಾರವರು ಸ್ವಾಧೀನದಲ್ಲಿ ಇದ್ದರು. ಆಸ್ತಿಯ ಮಾಲೀಕರು ವಾದಿ ಮದನಿ ರಾಮಯ್ಯ ಚೌದ್ರಿ ರವರು ನೀವು ಅನಧಿಕೃತವಾಗಿಸ್ವಾಧೀನದಲ್ಲಿ ಇದ್ದೀರಿ ನೀವು ಸ್ವಾಧೀನವನ್ನು ಬಿಟ್ಟು ಕೊಡಬೇಕು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಿಜಯಕುಮಾರವರನ್ನು ಸಾಕ್ಷಿಯನ್ನಾಗಿ ವಿಚಾರಣೆಗೆ ಹಾಜರು ಪಡಿಸುತ್ತೀರಾ ಎಂದರೆ ಅವರನ್ನು ಕೇಳಬೇಕು.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ** ಗಣಕ ಯಂತ್ರದಲ್ಲಿ **ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III** ನೇ ಎ.ಸಿ.ಸಿ & ಎಸ್.ಜೆ,ಬೆಂಗಳೂರು.